<u>ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ</u>

ಸಿ.ಸಿ. ನಂಬ್ರ: **474/ 2024**
ಸಿ.ಡಬ್ಲ್ಯೂ- **13**
ಪಿ.ಡಬ್ಲ್ಯೂ- **13**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಧರ ನಾಯಕ್ |
| ತಂದೆಯ ಹೆಸರು | : | ಪರಮೇಶ್ವರ ನಾಯಕ್ |
| ಪ್ರಾಯ | : | 35 ವರ್ಷ |
| ಉದ್ಯೋಗ | : | ಪಿ ಎಸ್ ಐ ಹರಿಹರ ಪೊಲೀಸ್ ಠಾಣೆ ಚಿಕ್ಕಮಗಳೂರು |
| ವಾಸ | : | ಚಿಕ್ಕಮಗಳೂರು |

ದಿನಾಂಕಃ 03-02-2026 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಹಕರಿಂದ</u>

ನಾನು 2019 ರಿಂದ 2023 ಜನವರಿಯವರೆಗೆ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ದಿನಾಂಕಃ 24-10-2020 ರಂದು ಠಾಣೆಯಲ್ಲಿರುವಾಗ ಸಂಜೆ ಸುಮಾರು 7.15 ಕ್ಕೆ ಪಿರ್ಯಾದಿದಾರಾದ ರಾಮ ಮೋಗವೀರ ಇವರು ಠಾಣೆಗೆ ಬಂದು ದೂರನ್ನು ನೀಡಿದ್ದು, ದೂರನ್ನು ಸ್ವೀಕರಿಸಿಕೊಂಡು ಅಪರಾಧ ಸಂಖ್ಯೆ 95/2020 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ದೂರು ಹಾಗೂ ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಯವರಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದೂರನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.12 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 12(ಎ) ಎಂದು ಗುರುತಿಸಲಾಯಿತು.

ದಿನಾಂಕ 25-10-2020 ರಂದು ಸದರಿ ಪ್ರಕರಣದ ದೂರುದಾರರಾದ ರಾಮ ಮೋಗವೀರರವರು ತೋರಿಸಿಕೊಟ್ಟಂತೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು

ಪಂಚಾಯತಿದಾರಾರಾದ ಶೇಖರ ಮೋಗವೀರ ಹಾಗೂ ಸುಧಾಕರ ಮೋಗವೀರರವರ ಸಮಕ್ಷಮ ಬೆಳಿಗ್ಗೆ 11 ರಿಂದ 11.45 ಗಂಟೆಯವರೆಗೆ ಸ್ಥಳ ಪಂಚನಾಮೆ ತಯಾರಿಸಿ ಸ್ಥಳದಲ್ಲಿ 3 ಪೋಟೋ ತೆಗೆದಿರುತ್ತೇನೆ. ಸಾಕ್ಷಿ ಸ್ಥಳ ಪಂಚನಾಮೆ ಹಾಗೂ 3 ಪೋಟೋಗಳನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆ ಹಾಗೂ ಪೋಟೋಗಳು ಈಗಾಗಲೇ ನಿ.ಪಿ. 2 ರಿಂದ 5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಡಿ), 3(ಎ) ಹಾಗೂ 4(ಎ) ಎಂದು ಗುರುತಿಸಲಾಯಿತು. ಇದೇ ದಿನ ಸಾಕ್ಷಿದಾರರಾದ ಕುಮಾರಿ ಅಮೃತರವರ ಹೇಳಿಕೆ ದಾಖಲು ಮಾಡಿಕೊಂಡಿದ್ದು, ಅವರು ತಮ್ಮ ಹೇಳಿಕೆಯಲ್ಲಿ ದಿನಾಂಕ 20-10-2020 ರಂದು ನಾನು ಮನೆಯಲ್ಲಿ Work from home ಕೆಲಸ ಮಾಡುತ್ತಿದ್ದು ಮನೆಯಲ್ಲಿ ಕರೆಂಟ್ ಇಲ್ಲದ ಕಾರಣ ತನ್ನ ಅಕ್ಕನ ಮನೆಯಾದ ಅಂಪಾರಿಗೆ ಹೋಗಿದ್ದು ಈ ಸಮಯದಲ್ಲಿ ಹಿಂದಿನ ಬಾಗಿಲಿಗೆ ನೈಲಾನ್ ಹಗ್ಗದಿಂದ ಕಟ್ಟಿ ಮುಂಭಾಗಿಲಿಗೆ ಬೀಗವನ್ನು ಹಾಕಿಕೊಂಡು ತನ್ನ ಅಕ್ಕನ ಮನೆಗೆ ಹೋಗಿದ್ದು ಈ ಸಂದರ್ಭದಲ್ಲಿ ನಮ್ಮ ಮನೆಯ ಗಾಡ್ರೇಜ್ ನಲ್ಲಿ ಇಟ್ಟಿದ್ದ ಒಂದು ಚಿನ್ನದ ಕರಿಮಣಿ ಸರ, 3 ಸಣ್ಣ ಉಂಗುರರಗಳು ಹಾಗೂ 710/- ರೂ. ಕಳ್ಳತನ ಆಗಿರುತ್ತದೆ ಎಂದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ನಂತರ ಅದೇ ದಿನ ಪ್ರಕರಣದ ಮತ್ತೊಬ್ಬ ಸಾಕ್ಷಿದಾರಳು ಶ್ರೀಮತಿ ಮುತ್ತುರವರು ತಮ್ಮ ಹೇಳಿಕೆಯಲ್ಲಿ ತಾನು ಪ್ರತಿದಿನ ಗೇರು ಬೀಜ ಪ್ಯಾಕ್ಟರಿಗೆ ಕೆಲಸಕ್ಕಾಗಿ ಹೋಗುತ್ತಿದ್ದು ದಿನಾಂಕ 20-10-2020 ರಂದು ಸಹ ಪ್ರತಿದಿನದಂತೆ ಕೆಲಸಕ್ಕೆ ಹೋಗಿದ್ದು ಕೆಲಸ ಮುಗಿಸಿ ಮನೆಗೆ ಬಂದಾಗ ತಮ್ಮ ಪತಿಯಾದ ರಾಮ ಮೊಗವೀರ ತಿಳಿಸಿದಂತೆ ನಮ್ಮ ಮನೆಯ ಚಿನ್ನಾಭಾರಣಗಳು ಹಾಗೂ ನಗದು ಹಣ ಕಳವು ಆಗಿದೆ ಎಂದು ತಿಳಿಸಿದ್ದು ತಾನು ಮನೆಗೆ ಬಂದು ನೋಡಿದಾಗ ಹಿಂದಿನ ಭಾಗಿಲಿನ ನೈಲಾನ್ ಹಗ್ಗ ತುಂಡು ಮಾಡಿ ಹಿಂಬದಿಯಿಂದ ಮನೆಯ ಒಳಗೆ ಪ್ರವೇಶಿಸಿ ಗಾಡ್ರೇಜ್ ನಲ್ಲಿ ಇಟ್ಟಿದ್ದ ಚಿನ್ನಾಭರಣ ಹಾಗೂ ನಗದು ಹಣವನ್ನು ದೋಚಿಸಿರುತ್ತಾರೆ, ಈ ಬಗ್ಗೆ ದೂರನ್ನು ದಾಖಲಿಸಿರುವುದಾಗಿ ಹೇಳಿಕೆ ನೀಡಿರುತ್ತಾರೆ.

ದಿನಾಂಕ 20-10-2020 ರಂದು ಕುಂದಾಪುರ ಗ್ರಾಮಾಂತರ ಠಾಣೆಯಿಂದ ಇ ಮೈಲ್ ಸಂದೇಶ ಬಂದಿದ್ದು ಸದರಿ ಇಮೈಲ್ ಸಂದೇಶದಂತೆ ಕುಂದಾಪುರ ಗ್ರಾಮಾಂತರ ಠಾಣೆಯ ಗುನ್ನಾ ನಂಬ್ರ 61/20 ರಲ್ಲಿ ಆರೋಪಿತ ವಿಜೇತ್ ಹೆಗ್ಡೆ ಅಲಿಯಾಸ್ ನಿತೀಶ್ ಎಂಬವವರನ್ನು ವಶಕ್ಕೆ ಪಡೆದಿದ್ದು ಆತನು ಶಂಕರನಾರಾಯಣ ಠಾಣಾ 95/20 ಪ್ರಕರಣದಲ್ಲಿನ ಚಿನ್ನಾಭರಣಗಳನ್ನು ಸಹ ಕಳವು ಮಾಡಿರುವುದಾಗಿ ಹಾಗೂ ಅವುಗಳನ್ನು ಪ್ರಭು ಜ್ಯುವೆಲ್ಲರ್ ರವರಿಗೆ ಮಾರಾಟ ಮಾಡುವುದಾಗಿ ಒಪ್ಪಿಕೊಂಡಿರುತ್ತಾನೆ ಎಂಬುದಾಗಿ ಮಾಹಿತಿ ನೀಡಿದ್ದು ಈ ಮಾಹಿತಿಯಂತೆ ಸದರಿ ಆರೋಪಿತನ ಬಾಡಿ ವಾರೆಂಟ್ ಗಾಗಿ ಮಾನ್ಯ ನ್ಯಾಯಲಯಕ್ಕೆ ಕೋರಿಕೊಂಡಿರುತ್ತೇನೆ.

ದಿನಾಂಕ 01-11-2020 ರಂದು ಆರೋಪಿತ ವಿಜೇತ್ ಹೆಗ್ಡೆ ಎಂಬುವವರನ್ನು 4 ದಿನಗಳ ಕಾಲ ಪೊಲೀಸ್ ಅಬಿರಕ್ಷೆಗೆ ನೀಡುವಂತೆ ಕೋರಿ ಮಾನ್ಯ ನ್ಯಾಯಲಯಕ್ಕೆ ಕೋರಿಕೆ ಸಲ್ಲಿಸಿರುತ್ತೇನೆ. ನಂತರ

ದಿನಾಂಕ 09-11-2020 ರಂದು ಕುಂದಾಪುರ ಗ್ರಾಮಾಂತರ ಠಾಣೆಯ ಹೆಚ್ ಸಿ 12 ನೇ ನಾಗೇಶ್ ರವರು ಕೋರಿಕೆ ಪತ್ರ ಹಾಗೂ ಮಾನ್ಯ ನ್ಯಾಯಲಯದ ಆದೇಶ ಪ್ರತಿಯೊಂದಿಗೆ ಸದರಿ ಪ್ರಕರಣದಲ್ಲಿನ ಚಿನ್ನಾಭರಣಗಳನ್ನು ತಂದು ಹಾಜರು ಪಡಿಸಿದ್ದು ಈ ಸ್ವತ್ತುಗಳನುನ ಪಂಚರಾದ ಸುಧಾಕರ ಮೋಗವೀರ ಹಾಗೂ ನಾಗೇಶ್ ರವರ ಸಮಕ್ಷಮ ಠಾಣೆಯಲ್ಲಿ ಬೆಳಿಗ್ಗೆ 10 ರಿಂದ 10.45 ರವರೆಗೆ ವಶಕ್ಕೆ ಪಡೆಯಲಾಯಿತು. ನಂತರ ಸ್ವತ್ತುಗಳನ್ನು ಪರಿಶೀಲಿಸಿದಾಗ 290 ಮೀ ಗ್ರಾಂ ತೂಕದ 1 ಸಣ್ಣ ಚಿನ್ನದ ಉಂಗುರ, 260 ಮೀ ಗ್ರಾಂ ತೂಕದ ಒಂದು ಸಣ್ಣ ಚಿನ್ನದ ಉಂಗುರ, 400 ಮೀ ಗ್ರಾಂ ತೂಕದ ಒಂದು ಸಣ್ಣ ಚಿನ್ನದ ಉಂಗುರ, 18 ಗ್ರಾಂ 700 ಮೀ ತೂಕದ ತುಂಡಾದ ಚಿನ್ನದ ಕರಿಮಣಿ ಸರ ಇದ್ದು ಇವುಗಳನ್ನು ಠಾಣಾ ಸ್ವತ್ತು ಪಟ್ಟಿ ಸಂಖ್ಯೆ 53/2020 ರಂತೆ ದಾಖಲಿಸಿ ಮಾನ್ಯ ನ್ಯಾಯಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ಸದರಿ ಸ್ವತ್ತುಗಳನ್ನು ಗುರುತಿಸಿದ ಬಗ್ಗೆ ಪಿರ್ಯಾದಿದಾರರಾದ ರಾಮ ಮೋಗವೀರ ಇವರ ಮುಂದುವರಿದ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ದಿನಾಂಕ 13-11-2020 ರಂದು ಆರೋಪಿಯನ್ನು ಬಾಡಿ ವಾರೆಂಟ್ ಮುಖಾಂತರ ವಶಕ್ಕೆ ಪಡೆದಿದ್ದು ಆರೋಪಿಯ ಸ್ವ ಇಚ್ಛಾ ಹೇಳಿಕೆ ದಾಖಲು ಮಾಡಿ ನಂತರ ಆರೋಪಿ ತೋರಿಸಿ ಕೊಟ್ಟಂತೆ ಕೃತ ನಡೆದ ಸ್ಥಳದ ಸ್ಥಳ ಪಂಚನಾಮೆಯನ್ನು ಪಂಚರಾದ ಶೇಖರ ಮೋಗವೀರ ಹಾಗೂ ರಾಮ ಪೂಜಾರಿಯವರ ಸಮಕ್ಷಮ ಮಧ್ಯಾಹ್ನ 1.30 ರಿಂದ 3.15 ರವರೆಗೆ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆ ಈಗಾಗಲೇ ನಿ.ಪಿ.8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.8(ಸಿ) ಎಂದು ಗುರುತಿಸಲಾಯಿತು. ದಿನಾಂಕ 24-10-2020 ರ ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸ್ವ ಇಚ್ಛಾ ಹೇಳಿಕೆಯನ್ನು ನಿ.ಪಿ.13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.13 (ಎ) ಎಂದು ಗುರುತಿಸಲಾಯಿತು.

ಅದೇ ದಿನ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾತಿ ನೀಡುವಂತೆ ಕೋರಿ ಕುಂದಾಪುರ ಗ್ರಾಮಾಂತರ ಠಾಣೆಗೆ ಕೋರಿಕೆಯನ್ನು ಸಲ್ಲಿಸಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರ ಕಡತದಲ್ಲಿ ಇಲ್ಲದೇ ಇರುವುದರಿಂದ ಗುರುತಿಸಿರುವುದಿಲ್ಲ. ದಿನಾಂಕ 21-11-2020 ರಂದು ಕುಂದಾಪುರ ಗ್ರಾಮಾಂತರ ಠಾಣೆಯ ಅಪರಾಧ ಸಂಖ್ಯೆ 61/20 ರ ಪಿಎಫ್ ಪಟ್ಟಿ 73/20, ದಿನಾಂಕ 25-10-2020 ರ ಸ್ವತ್ತು ಸ್ವಾಧೀನತಾ ಮಹಜರು, ಅಕ್ರ ಸಂಖ್ಯೆ 61/20 ರ ಆರೋಪಿಯ ಸ್ವ ಇಚ್ಛಾ ಹೇಳಿಕೆ ಹಾಗೂ ಪ್ರಥಮ ವರ್ತಮಾನ ವರದಿಯನ್ನು ಹಾಗೂ ಚಿನ್ನ ಖರೀದಿದಾರರ ಹೇಳಿಕೆಯನ್ನು ಸಹ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅಕ್ರ ಸಂಖ್ಯೆ 61/20 ರ ಸ್ವತ್ತು ಸ್ವಾಧೀನ ಮಹಜರು ಈಗಾಗಲೇ ನಿ.ಪಿ.10 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿ ಇಲ್ಲದೇ ಇರುವುದರಿಂದ ಸಹಿಯನ್ನು ಗುರುತಿಸಿರುವುದಿಲ್ಲ. ದಿನಾಂಕ 25-10-2020 ರ ಅಕ್ರ ಸಂಖ್ಯೆ61/20 ರ ಸ್ವತ್ತು ಪಟ್ಟಿಯ ದೃಡಿಕೃತ ನಕಲು, ಪ್ರಥಮ ವರ್ತಮಾನ ವರದಿಯ ದೃಡಿಕೃತ ನಕಲುನ್ನು ನೋಡಿ ಗುರುತಿಸಿದ್ದು ಸದರಿ

2 ದಾಖಲೆಗಳಲ್ಲಿ ಸಾಕ್ಷಿಯ ಸಹಿ ಇಲ್ಲದೇ ಇರುವುದರಿಂದ ಸದರಿ ದಾಖಲೆಗಳನ್ನು ನಿ.ಪಿ.14 ಮತ್ತು 15 ಎಂದು ಗುರುತಿಸಿ, ಸಾಕ್ಷಿಯ ಸಹಿಯನ್ನು ಗುರುತಿಸಿರುವುದಿಲ್ಲ. ಠಾಣಾ ಹೆಚ್ ಸಿ ಗೋಪಾಲರವರಿಂದ ಪಂಚನಾಮೆ ಮಾಡಿದ ಸಮಯ ಹಾಗೂ ಸ್ವತ್ತುಗಳನ್ನು ವಶಪಡಿಸಿಕೊಂಡ ಸಮಯದಲ್ಲಿ ಫೋಟೋಗ್ರಾಫಿ ಮಾಡಿದ ಬಗ್ಗೆ 65 ಬಿ ಸರ್ಟಿಫಿಕೇಟ್ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ನಿ.ಪಿ.16 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.16(ಎ) ಎಂದು ಗುರುತಿಸಲಾಯಿತು.ತದನಂತರ ಆರೋಪಿಯ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಯು ಆರ್ ಎಸ್ ವಕೀಲರಿಂದ</u>

1. ಪ್ರಥಮ ವರ್ತಮಾನ ವರದಿಯನ್ನು ಘಟನೆ ನಡೆದ 3 ದಿನಗಳ ನಂತರ ತಯಾರಿಸಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋಗಿದೆ ಎಂದು ಹೇಳಿದ ಸಮಯದಲ್ಲಿ ತೆಗೆದ ಫೋಟೋಗಳಲ್ಲಿ ಕಟ್ಟಾದ ನೈಲಾನ್ ಹಗ್ಗ, ಮುರಿದ ಬೀಗ ಸ್ಥಳದಲ್ಲಿ ಇದ್ದ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿ. ನಾನು ಬೇಟಿ ಮಾಡಿದ ಸಮಯದಲ್ಲಿ ಕರಡಿಗೆ ಅಥವಾ ಜುವೆಲ್ಲರಿ ಬಾಕ್ಸ್ ವಶಪಡಿಸಿಕೊಂಡಿರುವುದಿಲ್ಲ. ನಾನು ಕರಿಮಣಿಯ ಬಿಲ್ ನ್ನು ವಶಪಡಿಸಿಕೊಂಡಿರುವುದಿಲ್ಲ, ಸಾಕ್ಷಿ ಪಿರ್ಯಾದಿದಾರರು ನನ್ನ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

2. ನನ್ನ ಮುಂದೆ ಪಿರ್ಯಾದಿ ನೀಡುವಾಗ ಹಾಗೂ ಹೇಳಿಕೆಯನ್ನು ಸಾಕ್ಷಿಗಳು ದಾಖಲಿಸುವಾಗ ಸದರಿ ಕಳವಾದ ಚಿನ್ನದ ಒಡವೆಯ ವರ್ಣನೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ಮನೆಯ ಎದುರು ಸುಮಾರು 20 ರಿಂದ 25 ಮನೆಗಳು ಇವೆ ಎಂದು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ನೇರವಾಗಿ ಮನೆಯ ಹಿಂಬದಿಗೆ ಯಾರ ಮನೆ ಇತ್ತು ಎಂದು ನನಗೆ ನೆನಪಿರುವುದಿಲ್ಲ. ಪಶ್ಚಿಮಕ್ಕೆ ಆರೋಪಿಯ ಮನೆ ಇತ್ತು. ಉತ್ತರಕ್ಕೆ ಡಾಂಬರ್ ರಸ್ತೆ, ದಕ್ಷಿಣಕ್ಕೆ ಲಚ್ಚ ಎಂಬುವವರಿಗೆ ಸೇರಿದ ಮನೆ ಇತ್ತು, ಪೂರ್ವ ದಿಕ್ಕಿನಲ್ಲಿ ಖಾಲಿ ಜಾಗ ಇತ್ತು.

3. ಅದು ಸರ್ಕಾರದಿಂದ ಮಂಜೂರಾದ ಆಶ್ರಯ ಕಾಲೋನಿ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಯಾವುದೇ ನಕ್ಷೆಯನ್ನು ತಯಾರಿಸಿರುವುದಿಲ್ಲ. ನಾನು ಸ್ಥಳದಲ್ಲಿ ಯಾವುದೇ ಮಹಜರು ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕ 13-11-2020 ರಂದು ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 24-10-2020 ರಂದು ನಾನು ಆರೋಪಿಯ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆ ಎಂದರೆ ಸಾಕ್ಷಿ ಅದು ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯವರು ಪಡೆದ ಹೇಳಿಕೆ ಎಂದು ನುಡಿಯುತ್ತಾರೆ. ನಿ.ಪಿ.13 ಸ್ವ ಇಚ್ಛಾ ಹೇಳಿಕೆಯಲ್ಲಿ ಇರುವುದು ನನ್ನ ಹೇಳಿಕೆ ಎಂದರೆ ಸರಿ.

4. ದಿನಾಂಕ 24-10-2020 ರಂದು ನಾನು ಆರೋಪಿಯನ್ನು ದಸ್ತಗಿರಿ ಮಾಡಿ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆ ನಂತರ ನಾನು ದೂರುದಾರನಿಂದ ಸುಳ್ಳು ದೂರನ್ನು ಪಡೆದು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಿನಾಂಕ 13-11-2020 ರಂದು ಬಾಡಿ ವಾರೆಂಟ್ ಆದೇಶ ಪಡೆದಿರುತ್ತೇನೆ. ನಾನು ಆರೋಪಿಯ ಯಾವುದೇ ಸ್ವ ಇಚ್ಛಾ ಹೇಳಿಕೆ ಪಡೆದಿರುವುದಿಲ್ಲ ಹಾಗೂ ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಮು.ಮಾಲಿಗೂ ಹಾಗೂ ಆರೋಪಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

5. ನಾನು ಗ್ರಾಮಾಂತರ ಠಾಣೆಯಿಂದ ಯಾವುದೇ ದಾಖಲೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತ ಸ್ಥಳ ಪಂಚನಾಮೆಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸ್ವತ್ತುನ್ನು ಸ್ವೀಕರಿಸಿದ್ದು ಇಲ್ಲ ಪರಿಶೀಲಿಸಿದ್ದು ಇಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣ್ಕೂ, ಆರೋಪಿಗೂ ಹಾಗೂ ಮು.ಮಾಲಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

1. ನಾನು ದೋಷರೋಪಣೆ ಪಟ್ಟಿ ಸಲ್ಲಿಸುವಾಗ ದಿನಾಂಕ 24-10-2020 ರಂದು ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯವರು ದಾಖಲಿಸಿಕೊಂಡ ಆರೋಪಿಯ ಸ್ವ ಇಚ್ಛಾ ಹೇಳಿಕೆ ನ್ಯಾಯಲಯಕ್ಕೆ ಹಾಜರು ಪಡಿಸಿರುತ್ತೇನೆ. ಆ ದಿನ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯವರು ಆರೋಪಿಯ ಸ್ವ ಇಚ್ಛಾ ಹೇಳಿಕೆ ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯವರು ದಾಖಲಿಸಿಕೊಂಡ ಆರೋಪಿಯ ಹೇಳಿಕೆಯನ್ನು ನಾನು ನ್ಯಾಯಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಅದು ಕೊಟ್ಟಿರುವುದಿಲ್ಲ , ಕಡತದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ 13-11-2020 ರಂದು ನಾನು ಆರೋಪಿಯ ಸ್ವ ಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಸ್ವ ಇಚ್ಛಾ ಹೇಳಿಕೆಯಲ್ಲಿ ದಿನಾಂಕ 24-10-2020 ರಂದು ನಮೂದಿಸಿರುವುದು ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ.

<u>ಮರು ಪಾಟಿ ಸವಾಲುಃ ಆರೋಪಿ ಪರ ಶ್ರೀ ಯು ಆರ್ ಎಸ್ ವಕೀಲರಿಂದ</u>

1. ಆ ಸಮಯದಲ್ಲಿ ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಪಿ ಎಸ್ ಐ ರವರು ರಾಜ್ ಕುಮಾರ್ ಆಗಿದ್ದರು. ಈ ಪ್ರಕರಣದಲ್ಲಿ ಅಂತಿಮ ವರದಿಯನ್ನು ನಾನೇ ಸಲ್ಲಿಸಿರುತ್ತೇನೆ. ಆ

ಸಮಯದಲ್ಲಿ ಸ್ವ ಇಚ್ಛಾ ಹೇಳಿಕೆಯಲ್ಲಿ ತಪ್ಪಾಗಿ ನಮೂದಾದ ದಿನಾಂಕವನ್ನು ಸರಿಪಡಿಸಿ ನ್ಯಾಯಲಯಕ್ಕೆ ಸಲ್ಲಿಸಿರುವುದಿಲ್ಲ. ಇದೇ ಮೊದಲ ಬಾರಿಗೆ ಸ್ವ ಇಚ್ಛಾ ಹೇಳಿಕೆಯಲ್ಲಿ ದಿನಾಂಕ ತಪ್ಪಾಗಿದೆ ಎಂದು ಹೇಳುತ್ತಿರುತ್ತೇನೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ, ಕೇ, ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ